ಕರ್ನಾಟಕ ವಿಧಾನಸಭೆ

ಮಂಗಳವಾರ 1ನೇ ಫೆಬ್ರವರಿ 2005 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣ) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1. ಪ್ರಕಟಣೆ

ವಿಷಯ:– ವಿಧಾನಸಭಾ ಸದಸ್ಯರಾದ ಶ್ರೀ ಯು.ಟಿ. ಫರೀದ್ ರವರು ಸದನಕ್ಕೆ ಗೈರು ಹಾಜರಾಗಲು ಅನುಮತಿ ಕೋರಿಕೆ

ಅಧ್ಯಕ್ಷರು : ವಿಧಾನಸಭಾ ಸದಸ್ಯರಾದ ಶ್ರೀ ಯು.ಟಿ. ಫರೀದ್‌ರವರು ಅನಾರೋಗ್ಯದ ಕಾರಣ ದಿನಾಂಕ 20–01–2005ರಿಂದ ಪ್ರಾರಂಭವಾಗಿರುವ ಪ್ರಸಕ್ತ ಅಧಿವೇಶನದ ಮುಕ್ತಾಯದವರೆಗೂ ಗೈರು ಹಾಜರಿ ಆಗಲು ಅನುಮತಿಯನ್ನು ಕೋರಿ ಪತ್ರವನ್ನು ಬರೆದಿರುತ್ತಾರೆ. ಇದಕ್ಕೆ ಸದನದ ಸಹಮತಿ ಇದೆಯೆಂದು ಭಾವಿಸಲಾಗಿದೆ.

(ಸದನವು ಶ್ರೀ ಯು.ಟಿ. ಫರೀದ್‌ರವರಿಗೆ ಸದನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ನೀಡಿತು.)

ಅಧ್ಯಕ್ಷರು : ಈಗ ಪ್ರಶ್ನೋತ್ತರ.

ಶ್ರೀ ಗೋವಿಂದ ಮಕಟಪ್ಪ ಕಾರಜೋಳ್ : ಮಾನ್ಯ ಅಧ್ಯಕ್ಷರೆ, ಇವೊತ್ತು ಆಲಮಟ್ಟಿಯಲ್ಲಿ ಸಂಸದರ ನೇತೃತ್ವದಲ್ಲಿ.....

ಅಧ್ಯಕ್ಷರು : ನೀವು ಕುಳಿತುಕೊಳ್ಳಿ. ನಿಮಗೆ ಮಾತನಾಡಲು ಈಗ ಅವಕಾಶವನ್ನು ಕೊಟ್ಟಿಲ್ಲ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಆಲಮಟ್ಟಿಯಲ್ಲಿ ಸಂಸದರ ನೇತೃತ್ವದಲ್ಲಿ ಧರಣಿ ನಡೆಯುತ್ತಿರುವ ಬಗ್ಗೆ

ಶ್ರೀ ಗೋವಿಂದ ಮಕಟಪ್ಪ ಕಾರಜೋಳ್ : ಇಲ್ಲ. ಹಾಗಾಗೋದಿಲ್ಲ. ಇವೊತ್ತು ತಾವು ನಮಗೆ ಅವಕಾಶ ಕೊಡಲೇಬೇಕು.

ಅಧ್ಯಕ್ಷರು : ಕಾರ್‌ಜೋಳ್‌ರವರೇ, ಇದೇನು ವಿಧಾನಸಭೆಯೋ, ಏನು?

ಶ್ರೀ ಗೋವಿಂದ ಎಂ. ಕಾರ್‌ಜೋಳ್ : ದಯವಿಟ್ಟು ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು : ನೀವೇನು ನನಗೆ ಹೆದರಿಸುತ್ತಿದ್ದೀರೇನು? ಆ ಪದವನ್ನು ಮೊದಲು ನೀವು ವಾಪಸ್ಸು ತೆಗೆದುಕೊಳ್ಳಿ. ಆ ಪದವನ್ನು ವಾಪಸ್ಸು ತೆಗೆದುಕೊಳ್ಳಿ. ನಾವು ಅವಕಾಶ ಕೊಡದಿದ್ದರೆ ಎಂದು ಏರು ಧ್ವನಿಯಲ್ಲಿ ತಾವು ಮಾತನಾಡುವುದಕ್ಕೆ ಇಲ್ಲಿ ನಿಮಗೆ ಅವಕಾಶ ಇಲ್ಲ. ತಾವು ಜವಾಬ್ದಾರಿಯಿಂದ ಮಾತನಾಡಬೇಕು.

ಶ್ರೀ ಗೋವಿಂದ ಎಂ. ಕಾರ್‌ಜೋಳ್ : ನಾನು ಜವಾಬ್ದಾರಿಯಿಂದ ಮಾತನಾಡಿದ್ದೇನೆ. ನಾನು ಹೆದರಿಸುತ್ತಿಲ್ಲ.

ಅಧ್ಯಕ್ಷರು : ನೀವೇನು ನನಗೆ ಹೆದರಿಸುತ್ತಿದ್ದೀರೇನು? ಮಾತನಾಡುವಾಗ ಸರಿಯಾದ ರೀತಿಯಲ್ಲಿ ಪದ ಬಳಕೆ ಉಪಯೋಗಿಸಿ ಮಾತನಾಡಿ.